# ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ.

**ಸಿ.ಸಿ.ನಂ. 1355/2014**

| | | |
|---|---|---|
| ಸಾಕ್ಷಿದಾರರ ಹೆಸರುಃ | ಮಹಾದೇವಮ್ಮ | ಪಿ.ಡಬ್ಲ್ಯೂಃ 01 |
| ತಂದೆಯ ಹೆಸರುಃ | ಸಿದ್ದಶೆಟ್ಟಿ | ಸಿ.ಡಬ್ಲ್ಯೂಃ 01 |
| ವಯಸ್ಸುಃ | 28 ವರ್ಷ | ದಿಃ 01.07.2026 |
| ಉದ್ಯೋಗಃ | ಗೃಹಿಣಿ | ಪ್ರಮಾಣ ವಚನ ಬೋಧಿಸಿದೆ. |
| ವಾಸಸ್ಥಳಃ | ಹುಸ್ಕೂರು | |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ರವರಿಂದಃ-**

ಆರೋಪಿಯ ಪರಿಚಯ ಇದೆ. ಆತ ನನ್ನ ಗಂಡ. ನನ್ನ ಗಂಡ ನಾನು ದೂರು ನೀಡುವ ವೇಳೆಗೆ ಸುಮಾರು 05 ವರ್ಷಗಳ ಹಿಂದೆ ವಿವಾಹವಾಗಿದ್ದು, ಮನೆಗೆ ಕರೆದುಕೊಂಡು ಹೋಗಿ ಬಿಟ್ಟು ಆತ ಮನೆಗೆ ಬರುತ್ತಿರಲಿಲ್ಲ. ಆತ ನನ್ನ ಪ್ರತಿನಿತ್ಯದ ಊಟ, ಬಟ್ಟೆ, ವಸತಿ ಯಾವುದಕ್ಕೂ ಅನುಕೂಲ ಮಾಡಿಕೊಡದೇ, ಕೆಲಸಕ್ಕೆ ಹೋಗಿಲ್ಲದೇ ತಂದು ಕೊಡಲು ಆಗುವುದಿಲ್ಲ ಎಂದು ಹೇಳುತ್ತಾರೆ. ಆಗ ಆತ ಕೂಲಿ ಕೆಲಸ ಮಾಡುತ್ತಿದ್ದರು. ಈ ಎಲ್ಲ ವಿಚಾರವನ್ನು ನಾನು ನನ್ನ ತಂದೆ-ತಾಯಿಗೆ ತಿಳಿಸಿರುತ್ತೇನೆ. ಆದರೂ ಆರೋಪಿ ಅದೇ ರೀತಿ ಮಾಡುತ್ತಿದ್ದು, ಆನಂತರ ಆರೋಪಿಯ ಗ್ರಾಮದಲ್ಲಿ ಪಂಚಾಯಿತಿ ನಡೆಸಿ, ಅಲ್ಲೂ ಆತ ನೋಡಿಕೊಳ್ಳದೇ, ಆ ನಂತರ ನನ್ನ ಪೋಷಕರ ಮನೆಗೆ ಹೋದೆ . ಕೊನೆಯದಾಗಿ ಆರೋಪಿತಯ ವಿರುದ್ಧ ಠಾಣಯಲ್ಲಿ ದೂರು ನೀಡಿರುತ್ತೇನೆ. ಆ ನಂತರ ಪೋಲಿಸರು ಆರೋಪಿಯ ಮನೆಗೆ ಬಂದು ನನ್ನನ್ನು ವಿಚಾರಿಸಿದರು.

(ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗಾಗಿ ಸಮಯ ಕೋರಿದ್ದು, ಸಮಯ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ ಎಂದು ಒಪ್ಪಿದೆ.**

**Sd/-**

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ನಂಜನಗೂಡು.**